## ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 580
2. ಸದಸ್ಯರ ಹೆಸರು : ಆಯನೂರು ಮಂಜುನಾಥ್
3. ಉತ್ತರಿಸಬೇಕಾದ ದಿನಾಂಕ : 13.12.2018
4. ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ದಿನಾಂಕ:23.03.2007 ರಂದು ಶಿವಮೊಗ್ಗ ತಾಲ್ಲೂಕಿನ ಸೋಗಾನೆ ಗ್ರಾಮದಲ್ಲಿ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಬಿಡುಗಡೆಯಾದ ಅನುದಾನವೆಷ್ಟು; (ವಿವರ ನೀಡುವುದು) | ಶಿವಮೊಗ್ಗ ತಾಲ್ಲೂಕಿನ ಸೋಗಾನೆ ಗ್ರಾಮದಲ್ಲಿ ವಿಮಾನ ನಿಲ್ದಾಣದ ಅಭಿವೃದ್ಧಿಗಾಗಿ ಸರ್ಕಾರದ ಆದೇಶ ಸಂಖ್ಯೆ: ಮೂಅವಿ 16 ರಾಅವಿ 2002 ದಿನಾಂಕ 03-01-2007: ರಲ್ಲಿ ರೂ.5.83 ಕೋಟಿ ಮತ್ತು ಸರ್ಕಾರದ ಆದೇಶ ಸಂಖ್ಯೆ: ಮೂಅವಿ 70 ರಾಅವಿ 2007 ದಿನಾಂಕ: 19-07-2007 ರಲ್ಲಿ ರೂ 20.13 ಕೋಟಿ ಹೀಗೆ ಒಟ್ಟಾರೆಯಾಗಿ ರೂ.25.96 ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. |
| ಆ) | ಈ ಯೋಜನೆಗಾಗಿ ಎಷ್ಟು ಎಕರೆ ಜಮೀನನ್ನು ರೈತರಿಂದ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ; ಇದರಲ್ಲಿ ಸರ್ಕಾರಿ ಭೂಮಿ ಎಷ್ಟು; ಬಗರ್ ಹುಕುಂ ಮಾಡಿದ ಫಲಾನುಭವಿಗಳಿಗೆ ಎಕರೆಗೆ ನೀಡಿದ ಪರಿಹಾರ ಎಷ್ಟು; ಖಾತೆದಾರರಿಗೆ ನೀಡಿದ ಪರಿಹಾರವೆಷ್ಟು; (ಪೂರ್ಣ ವಿವರ ಒದಗಿಸುವುದು) | ಶಿವಮೊಗ್ಗ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಸುಮಾರು 662 ಎಕರೆ 38 ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ. ಸದರಿ ಜಮೀನಿನಲ್ಲಿ 529 ಎಕರೆ ಸರ್ಕಾರಿ ಭೂಮಿಯಾಗಿರುತ್ತದೆ. ಬಗರ್ ಹುಕುಂ ಮಾಡಿದ ಫಲಾನುಭವಿಗಳಿಗೆ 4.00 ಎಕರೆಗೆ ಮೀರದಂತೆ ಎಕರೆಗೆ ರೂ.2.00 ಲಕ್ಷದಂತೆ ಪರಿಹಾರ ನೀಡಲಾಗಿದೆ. ಖಾತೆದಾರರಿಗೆ ಎಕರೆ ಒಂದಕ್ಕೆ ರೂ.8.00 ಲಕ್ಷದಂತೆ ಪರಿಹಾರ ನೀಡಲಾಗಿದೆ. |
| ಇ) | ಶಿವಮೊಗ್ಗ ಏರ್‌ಪೋರ್ಟ್ ಡೆವಲಪರ್ಸ್ (RAHI Consortium) ನೊಂದಿಗೆ ಯಾವಾಗ ಒಪ್ಪಂದ ಮಾಡಿಕೊಳ್ಳಲಾಗಿದೆ, ಕಾಮಗಾರಿ ಪೂರ್ಣಗೊಳಿಸಲು ಎಷ್ಟು ಸಮಯ ನೀಡಲಾಗಿದೆ; ಯಾವಾಗ ಆರಂಭವಾಯಿತು ಮತ್ತು ಯಾವಾಗ ಪೂರ್ಣಗೊಳ್ಳುತ್ತದೆ; (ಕಾಮಗಾರಿವಾರು ವಿವರ ಒದಗಿಸುವುದು) | ಶಿವಮೊಗ್ಗ ವಿಮಾನ ನಿಲ್ದಾಣವನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ(ಪಿಪಿಪಿ) ಅಭಿವೃದ್ಧಿಪಡಿಸಲು ಸರ್ಕಾರದ ಆದೇಶ ಸಂಖ್ಯೆ:ಐಡಿಡಿ 24 ಡಿಐಎ 2000 ದಿನಾಂಕ 23/03/2007ರಲ್ಲಿ ಮಂಜೂರಾತಿ ನೀಡಿ, ಶಿವಮೊಗ್ಗ ಏರ್‌ಪೋರ್ಟ್ ಡೆವಲಪರ್ಸ್ ಪ್ರೈವೆಟ್.ಲಿಮಿಟೆಡ್, (M/s. Shimoga Airport Developers Private Limited) |

| | | |
|---|---|---|
| ಈ) | ಈ ವಿಮಾನ ನಿಲ್ದಾಣದ ಕಾಮಗಾರಿ ಸ್ಥಗಿತಗೊಳ್ಳಲು ಕಾರಣವೇನು; ಈ ನಿಟ್ಟಿನಲ್ಲಿ ಸರ್ಕಾರ ಕಾನೂನು ಕ್ರಮ ಕೈಗೊಂಡಿದೆ;(ವಿವರ ಒದಗಿಸುವುದು) | ಇವರೊಂದಿಗೆ ದಿನಾಂಕ 21.12.2010 ರಂದು ಪೂರಕ ಅಭಿವೃದ್ಧಿ ಒಪ್ಪಂದವನ್ನು ಮಾಡಿಕೊಳ್ಳಲಾಗಿತ್ತು. ಒಪ್ಪಂದದ ಪ್ರಕಾರ 24 ತಿಂಗಳ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದ ಕಾರಣ ದಿನಾಂಕ:21.01.2015 ರಂದು ಯೋಜನಾ ಒಪ್ಪಂದವನ್ನು ರದ್ದುಪಡಿಸಲಾಗಿರುತ್ತದೆ. |
| ಉ) | ಸದರಿ ವಿಮಾನ ನಿಲ್ದಾಣವನ್ನು ಯಾವಾಗ ಸಾರ್ವಜನಿಕ ಸೇವೆಗೆ ನೀಡಲಾಗುವುದು? (ವಿವರ ಒದಗಿಸುವುದು) | ಯೋಜನಾ ಒಪ್ಪಂದವನ್ನು ರದ್ದುಪಡಿಸಲಾಗಿದ್ದರಿಂದ, ನೋ-ಫ್ರಿಲ್(ಸಣ್ಣ ಸಾಮರ್ಥ್ಯದ) ವಿಮಾನ ನಿಲ್ದಾಣದ ಮಾದರಿಯಲ್ಲಿ ವಿಮಾನ ನಿಲ್ದಾಣವನ್ನು ಅಭಿವೃದ್ಧಿಪಡಿಸಲು ಟೆಂಡರ್ ಆಹ್ವಾನಿಸಿ, ಅಭಿವರ್ಧಕರನ್ನು ಆಯ್ಕೆ ಮಾಡಿದ ನಂತರ ಅಗತ್ಯ ಕ್ರಮ ಕೈಗೊಳ್ಳಲಾಗುವುದು. |

ಸಂಖ್ಯೆ: ಮೂಅಇ 96 ರಾಅವಿ 2018

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ